# ಜಗಾಯಿ-ಮಧಾಯಿ

**ಸ್ವರ್ಣಗೌರಿ**

ಶ್ರೀ ಚೈತನ್ಯ ಮಹಾಪ್ರಭು ಭಕ್ತಿ-ಭಾವಗಳ ಮೂಲಕ ಭಗವಂತನೆಡೆಗೆ ಸಾಗುವ ಮಾರ್ಗವನ್ನು ಜನಸಾಮಾನ್ಯರಿಗೆ ತೋರಿಸಿಕೊಟ್ಟ ಅವತಾರಪುರುಷರು. ಅವರ ಜೀವಿತಾವಧಿಯಲ್ಲಿ ಅವರಿಂದ ಉದ್ಧಾರಗೊಂಡ ಹಲವು ಜನರಲ್ಲಿ ಪ್ರಮುಖರು ಜಗಾಯಿ-ಮಧಾಯಿ ಎಂಬ ಸೋದರರು. ಅವರ ಬಗ್ಗೆ ಬರೆದಿರುವ ಲೇಖಕಿ, ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು. ಅನೇಕ ಲೇಖನಗಳನ್ನು ಬರೆದಿರುವ ಅವರು ಕೆಲವು ಗ್ರಂಥಗಳನ್ನೂ ರಚಿಸಿದ್ದಾರೆ.



**ಒ**ಮ್ಮೆ ಭಕ್ತನೊಬ್ಬ ಶ್ರೀರಾಮಕೃಷ್ಣರನ್ನು ಕೇಳುತ್ತಾನೆ, 'ಮಹಾಶಯರೆ, ಪಾಪ ಬುದ್ಧಿ ಏಕೆ ಬರುತ್ತದೆ?'' ಎಂದು.

ಶ್ರೀರಾಮಕೃಷ್ಣರು: ''ಆತನ ಸೃಷ್ಟಿಯಲ್ಲಿ ಎಲ್ಲವೂ ಇದೆ. ಸಾಧುಗಳನ್ನು ಆತನೇ ಸೃಷ್ಟಿಸಿದ್ದಾನೆ, ದುಷ್ಟರನ್ನೂ ಆತನೇ ಸೃಷ್ಟಿಸಿದ್ದಾನೆ. ಸದ್ಬುದ್ಧಿ ಕೊಡುವವನೂ ಅವನೇ; ದುರ್ಬುದ್ಧಿ ಕೊಡುವವನೂ ಅವನೇ.'' *(ವಚನವೇದ, ಭಾಗ-೧, ಪು.೨೫)*

ಭಗವಂತ ಪರಿಪೂರ್ಣ, ಪ್ರೇಮ ಸ್ವರೂಪ, ಆನಂದಸ್ವರೂಪ ಎಂದು ಶಾಸ್ತ್ರಗಳು ಸಾರುತ್ತವೆ; ಅನುಭಾವಿಗಳು ಅನುಭವಿಸಿದ್ದಾರೆ. ಆದರೆ ಯಾರು ಪರಿಪೂರ್ಣನೋ, ಆತನ ಸೃಷ್ಟಿ ಏಕೆ ಅಪರಿಪೂರ್ಣ? ಒಳಿತು-ಕೆಡುಕು, ಪಾಪ-ಪುಣ್ಯ, ಸುಖ-ದುಃಖಗಳ ಮಿಶ್ರಣ ಈ ಜಗತ್ತು. ಏಕೆ? ಹೀಗೇಕೆ? ಎಂಬ ಪ್ರಶ್ನೆ ಎಲ್ಲರನ್ನೂ ಒಂದಲ್ಲ ಒಂದು ದಿನ ಕಾಡುತ್ತದೆ. ಮಾನವನ ಮನದಲ್ಲಿನ ಈ ತೊಳಲಾಟವನ್ನು, ತುಮುಲವನ್ನು ಅರಿತ ಶ್ರೀರಾಮಕೃಷ್ಣರು ಮತ್ತೊಂದು ಸಂದರ್ಭದಲ್ಲಿ ಹೀಗೆಂದಿದ್ದಾರೆ: ''ಭಗವಂತನ ಸೃಷ್ಟಿ ವೈಚಿತ್ರ್ಯವೇ ಹಾಗೆ. ಅದರಲ್ಲಿ ಸತತ ಒಳ್ಳೆಯದು-ಕೆಟ್ಟದು; ಸತ್-ಅಸತ್ ಇದ್ದೇ ಇರುತ್ತದೆ. ನೋಡಿಲ್ಲವೇ, ದುಷ್ಟರೂ ಬೇಕಾಗುವುದನ್ನು? ಒಂದು ಪಕ್ಷ ಒಂದು ಜಮೀನುದಾರಿಯಲ್ಲಿ ಜನ ದಂಗೆ ಏಳುತ್ತಾರೆ ಎಂದು ಇಟ್ಟುಕೊ. ಅದನ್ನು ಅಡಗಿಸಬೇಕಾದರೆ ಜಮೀನುದಾರ ಒಬ್ಬ ಯಾವುದಕ್ಕೂ ಹೇಸದ ದುಷ್ಟನನ್ನೇ ಕಳುಹಿಸಬೇಕಾಗುತ್ತದೆ''

*(ವಚನವೇದ, ಭಾಗ-೧, ಪು.೨೧೫)*

ಈ ಜಗತ್ತಿನಲ್ಲಿ ಪಾಪ-ಪುಣ್ಯಗಳೆಂಬುವು ಇದ್ದರೂ ಭಗವಂತ ಮಾತ್ರ ಅವುಗಳಿಂದ ನಿರ್ಲಿಪ್ತ. ಹೇಗೆ ಗಾಳಿಯು ಸುಗಂಧ

ದುರ್ಗಂಧಗಳಿಂದ ನಿರ್ಲಿಪ್ತವೋ ಹಾಗೆಯೇ ಭಗವಂತನು. ಶ್ರೀರಾಮಕೃಷ್ಣರ ವಾಕ್‌ಸ್ವರೂಪರಾದ ಸ್ವಾಮಿ ವಿವೇಕಾನಂದರು ತಮ್ಮ ಗುರುವಿನ ವಾಣಿಯನ್ನು ವಿಶದಪಡಿಸುತ್ತ, 'ಒಳ್ಳೆಯದು ಕೆಟ್ಟದ್ದು ಎರಡೂ ಬಿಡಿಸಲಾಗದ ರೀತಿಯಲ್ಲಿ ಬೆರೆತುಹೋಗಿವೆ. ಒಂದಿಲ್ಲದೆ ನಮಗೆ ಇನ್ನೊಂದು ಸಿಗುವಂತೆ ಇಲ್ಲ. ಯಾರನ್ನಾದರೂ ಸುಖಿಯನ್ನಾಗಿ ಮಾಡಬೇಕಾದರೆ ಮತ್ತಾರನ್ನೋ ದುಃಖಿಯನ್ನಾಗಿ ಮಾಡಬೇಕಾಗುತ್ತದೆ. *(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ. ೧, ಪು.೩೫೨)* ಕೆಟ್ಟದ್ದು ಇಲ್ಲದೆ ಒಳ್ಳೆಯದನ್ನು ಪಡೆಯುವುದು ಹೇಗೆ? ಒಳ್ಳೆಯದು ಕೆಟ್ಟದ್ದು ಇವೆರಡೂ ಒಂದೇ ನಾಣ್ಯದ ಎರಡು ಮುಖಗಳಾಗಿರುವಾಗ ಹೇಗೆ ತಾನೆ ಹಾಗಾಗಲು ಸಾಧ್ಯ ? ಈ ಪ್ರಪಂಚ ಪರಿಪೂರ್ಣವಾಗುವ ಕಾಲವೊಂದು ಬರುವುದು. ಆಗ ವ್ಯಾಧಿ, ಮೃತ್ಯು, ಅಸುಖ, ಪಾಪ ಇವು ಇರುವುದಿಲ್ಲ ಎಂಬುದು ಪ್ರತಿ ದೇಶದಲ್ಲಿಯೂ ಬಹು ಜನರ ನಂಬಿಕೆ. ಕ್ಷಣ ಮಾತ್ರ ಆಲೋಚಿಸಿದರೆ ಹಾಗೆಂದೂ ಆಗಲಾರದೆಂದು ನಮಗೆ ತಕ್ಷಣ ಗೊತ್ತಾಗುತ್ತದೆ.'' *(ಕೃತಿಶ್ರೇಣಿ, ಸಂಪುಟ ೧, ಪು.೮೮)*

ಆತನ ಮಾಯೆಯಲ್ಲಿ ವಿದ್ಯೆ-ಅವಿದ್ಯೆ, ಕತ್ತಲು-ಬೆಳಕು ಎರಡರ ಆವಶ್ಯಕತೆಯೂ ಇದೆ. ಕತ್ತಲು ಬೆಳಕಿನ ಮಹತ್ತನ್ನು ಇನ್ನೂ ಹೆಚ್ಚಾಗಿ ಪ್ರಕಾಶಗೊಳಿಸುತ್ತದೆ. ಮಹಾಪುರುಷರನ್ನು ತಯಾರು ಮಾಡಲು ಕಾಮ, ಕ್ರೋಧ, ಲೋಭಗಳನ್ನು ಸೃಷ್ಟಿಸಿದ್ದಾನೆ. ಇಂದ್ರಿಯಗಳನ್ನು ಗೆದ್ದರೆ ಮನುಷ್ಯ ಮಹಾಪುರುಷನಾಗುತ್ತಾನೆ. ಜಿತೇಂದ್ರಿಯನಿಗೆ ಭಗವಂತನ ಸಾಕ್ಷಾತ್ಕಾರವೂ ದೊರೆತುಬಿಡುತ್ತದೆ. ಅವತಾರಾದಿಗಳ ಜೀವನವನ್ನು ಹೊಕ್ಕರೆ ಇದಕ್ಕೆ ಅನೇಕ ಪುರಾವೆಗಳು ನಮಗೆ ದೊರೆಯುತ್ತದೆ. ಅಂತಹ ಒಂದು ನಿದರ್ಶನವನ್ನು ನಾವೀಗ ನೋಡೋಣ.

ಗೌರಾಂಗ, ಮಹಾಪ್ರಭು, ಶ್ರೀಚೈತನ್ಯ ಎಂಬ ವಿವಿಧ ನಾಮಗಳಿಂದ ಪ್ರಚಲಿತರಾದ ಚೈತನ್ಯರು ಕೋಮಲ ಹೃದಯಿಗಳು. ಜಗತ್ತಿನ ದುಃಖ ಕಷ್ಟಗಳ ಪರಿಚಯ ಪಡೆದ ಅವರು ಮನಕರಗಿ ಭಗವತ್ಕಥೆ ಹೇಳಿ ಎಲ್ಲರ ವ್ಯಥೆಯನ್ನು ಶಮನ ಮಾಡಲು ಪ್ರಯತ್ನಿಸುತ್ತಿದ್ದರು.

ಪ್ರತಿದಿನ ಸಾಯಂಕಾಲ ಭಕ್ತರೊಡಗೂಡಿ ನವದ್ವೀಪದ ರಸ್ತೆಗಳಲ್ಲಿ, ಗಂಗೆಯ ಘಟ್ಟದಲ್ಲಿ ಉಚ್ಚಸ್ವರದಲ್ಲಿ ಹರಿನಾಮ ಸಂಕೀರ್ತನೆ ಮಾಡುತ್ತಿದ್ದರು. ಅಲ್ಲದೆ ಪ್ರತ್ಯೇಕ ಮೊಹಲ್ಲಗಳಲ್ಲಿ ಮನೆಮನೆಗೆ ಹೋಗಿ ಧರ್ಮಜಾಗೃತಿಯ ಕೈಂಕರ್ಯದಲ್ಲಿ ತೊಡಗಿ ಕೈಜೋಡಿಸಿ ಹೇಳುತ್ತಿದ್ದರು, ''ಅಣ್ಣ ಈ ದುರ್ಲಭ ಮಾನವ ಜೀವನವನ್ನು ವ್ಯರ್ಥವಾಗಿ ಏಕೆ ಕಳೆಯುತ್ತಿರುವೆ? ಏಕೆ ತಾಪತ್ರಯಗಳಿಂದ ಸುಟ್ಟು ಹೋಗುತ್ತಿದ್ದೀಯ? ಹರಿಯನ್ನು ಪ್ರಾರ್ಥಿಸು. ಹರಿನಾಮಕೀರ್ತನೆಯನ್ನು ಮಾಡು. ಇದರಿಂದ ಹೃದಯದಲ್ಲಿ ಆನಂದ ಸಂಚಾರವಾಗುತ್ತದೆ. ಭಗವತ್ ಭಜನೆಯನ್ನು ಬಿಟ್ಟು ಶಾಂತಿ ಪಡೆಯಲು ಬೇರೆ ಯಾವ ಉಪಾಯಗಳೂ ಇಲ್ಲ''. ಉಚ್ಚ-ನೀಚ, ಧನಿಕ-ದರಿದ್ರ, ಪಂಡಿತ-ಮೂರ್ಖ ಎಂಬ ಭೇದವಿಲ್ಲದೆ ಎಲ್ಲರನ್ನೂ ಭಗವತ್ ಪಥದಲ್ಲಿ ತರುವ ಪ್ರಯತ್ನ ಮಾಡುತ್ತಿದ್ದರು.

ಶ್ರೀಚೈತನ್ಯರ ಇಚ್ಛೆಯಂತೆ ಅವರ ಪ್ರಮುಖ ಶಿಷ್ಯರಾದ ನಿತ್ಯಾನಂದರು ಮತ್ತು ಹರಿದಾಸರು ಇಡೀ ನವದ್ವೀಪದಲ್ಲಿ, ಗಲ್ಲಿಗಲ್ಲಿಗಳಲ್ಲಿ ಸಂಚರಿಸುತ್ತ ಪತಿತ-ನಿರ್ಧನ, ದೀನ-ದುಃಖಿ, ನಿಮ್ನ ಶ್ರೇಣಿಯ ಜನರ ನಡುವೆ ಧರ್ಮಪ್ರಚಾರ ಮಾಡತೊಡಗಿದರು. ಪರಿಣಾಮವಾಗಿ, ಜನಮನದಲ್ಲಿ ಒಂದು ಹೊಸ ಚೈತನ್ಯ ಸಂಚಾರವಾಯಿತು. ಇವರ ಪ್ರಭಾವದಿಂದ ಆ ಪ್ರದೇಶದಲ್ಲಿ ಧರ್ಮಭಾವನೆಯು ವೃದ್ಧಿಸಿ ಸಾಮಾನ್ಯ ಜನರ ಅಭ್ಯುದಯವಾಯಿತು. ಇದನ್ನು ಕಂಡು ಸಮಾಜದ ಸಂಪ್ರದಾಯನಿಷ್ಠರ ಗುಂಪು ಚಿಂತಿತವಾಯಿತು. ಅವರುಗಳು ಮತ್ತು ಧರ್ಮವಿದ್ವೇಷಿ ದುಷ್ಟ ಜನ ಚೈತನ್ಯರನ್ನು ಪರಮ ಶತ್ರುವೆಂದು ಭಾವಿಸಿ, ಅವರ ನಿಂದೆ ಮಾಡುತ್ತಾ ಅನಿಷ್ಟ ತರಲು ಯತ್ನಿಸಿದರು.

ಅದೇ ದಿನಗಳಲ್ಲಿ ನವದ್ವೀಪದಲ್ಲಿ ಜಗನ್ನಾಥ ಮತ್ತು ಮಾಧವ ಎಂಬ ಹೆಸರಿನ ಇಬ್ಬರು ಸೋದರರು ನಗರ ರಕ್ಷಣೆಯ ಕಾರ್ಯಕ್ಕೆ ನಿಯುಕ್ತರಾಗಿದ್ದರು. ಬ್ರಾಹ್ಮಣ ವಂಶಜರಾಗಿಯೂ ಅವರು ಸದಾಚರ ಸ್ವಧರ್ಮವನ್ನು ಮರೆತು ದುಷ್ಟತನ ಮತ್ತು ಮದ್ಯಪಾನದಲ್ಲಿ ದಿನ ಕಳೆಯುತ್ತಿದ್ದರು. ಜನ ಅವರನ್ನು ಜಗಾಯಿ-ಮಧಾಯಿ ಎಂದು ಕರೆಯುತ್ತಿದ್ದರು. ಚೈತನ್ಯರ ಧರ್ಮಪ್ರಚಾರ ಮತ್ತು ಹರಿನಾಮ ಸಂಕೀರ್ತನೆ ಅವರಿಗೆ ಸ್ವಲ್ಪವೂ ಇಷ್ಟವಾಗಲಿಲ್ಲ. ಸಂಕೀರ್ತನೆಯ ಜ್ವಾಲೆಯಿಂದ ಅವರು ಅಶಾಂತರಾದರು. ಕೆಲ ದಿನಗಳ ಬಳಿಕ ಅವರ ದುಷ್ಟ ಮಿತ್ರರಲ್ಲೂ ಅನೇಕರು ಶ್ರೀಚೈತನ್ಯರ ದಳವನ್ನು ಸೇರಿ ಸಂಕೀರ್ತನೆಯಲ್ಲಿ ಭಾಗವಹಿಸತೊಡಗಿದರು. ಹರಿನಾಮ ಉಚ್ಚರಿಸುತ್ತ ಆನಂದದಿಂದ ಹೊರಳಾಡುತ್ತಿದ್ದರು ಜನ. ತಮ್ಮೊಂದಿಗೆ ಬೆರೆಯುತ್ತಿಲ್ಲ, ಮದ್ಯ ಸೇವಿಸುತ್ತಿಲ್ಲ, ಗೂಂಡಾಗಿರಿ ಮಾಡುತ್ತಿಲ್ಲ. ಅದನ್ನು ನೋಡಿ ಅವರ ರೋಷ ಹೆಚ್ಚಿತು. ಸೇಡು ತೀರಿಸಿಕೊಳ್ಳುವ ಅವಕಾಶಕ್ಕಾಗಿ ಅವರು ಕಾಯುತ್ತಿದ್ದರು.

ಇತ್ತ ನಿತ್ಯಾನಂದರು ಹರಿದಾಸರ ಸಹಾಯದಿಂದ ಹರಿನಾಮ ಪ್ರಚಾರ ಕಾರ್ಯದಲ್ಲಿ ತಮ್ಮನ್ನು ಸಮರ್ಪಿಸಿಕೊಂಡಿದ್ದರು. ಅವರು ಯಾರನ್ನೇ ಭೇಟಿಯಾಗಲಿ, ಅವರನ್ನು ಪ್ರೇಮದಿಂದ ಆಲಂಗಿಸಿ ಹರಿನಾಮ ಹೇಳುವಂತೆ ಪ್ರಾರ್ಥಿಸುತ್ತಿದ್ದರು. ಒಂದು ದಿನ ಭಾವದಿಂದ ಉನ್ಮತ್ತರಾಗಿ ಹರಿನಾಮ ಕೀರ್ತನೆ ಮಾಡುತ್ತ ಅವರು ನವದ್ವೀಪದ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದರು. ಅದೇ ಸಮಯದಲ್ಲಿ ಜಗಾಯಿ-ಮಧಾಯಿ ಸೋದರರೊಂದಿಗೆ ಅವರ ಭೇಟಿಯಾಯಿತು. ಮತ್ತಿನಿಂದ ತೂರಾಡುತ್ತ, ಅಶ್ಲೀಲ ಬೈಗುಳಗಳನ್ನು ಹೇಳುತ್ತ ಇಬ್ಬರು ಸೋದರರೂ ಅವರ ಕಡೆಗೇ ನಡೆದುಕೊಂಡು ಬರುತ್ತಿದ್ದರು. ಭಾವೋನ್ಮತ್ತ ನಿತ್ಯಾನಂದರೂ ನೃತ್ಯ ಮಾಡುತ್ತಾ ಅವರೆಡೆಗೆ ನಡೆದರು. ಅವರ

ಮುಖದಿಂದ ಮಧುರ ಹರಿನಾಮ ಸ್ತೋತ್ರ ಹರಿಯುತ್ತಿತ್ತು. ನಿತ್ಯಾನಂದರನ್ನು ನೋಡುತ್ತಲೇ ಅವರಿಬ್ಬರೂ ಮಿತಿ ಮೀರಿ ವರ್ತಿಸತೊಡಗಿದರು. ಮಧಾಯಿ ಕೈಯಲ್ಲಿ ಮದ್ಯದ ಕುಡಿಕೆ ಇತ್ತು. ಅದನ್ನೇ ಅವರ ಮೇಲೆ ಎಸೆದನು. ಮಣ್ಣಿನ ಕುಡಿಕೆ ತಲೆಗೆ ತಾಗಿ ರಕ್ತ ಜೋರಾಗಿ ಚಿಮ್ಮತೊಡಗಿತು. ಈ ಘಟನೆಯನ್ನು ನೋಡಿ ಜನ ಹಾಹಾಕಾರ ಮಾಡಿದರು. ಆದರೆ ನಿತ್ಯಾನಂದರಿಗೆ ಆ ಕಡೆಗೆ ಇನಿತೂ ಗಮನವಿರಲಿಲ್ಲ. ನರ್ತಿಸುತ್ತಾ ಮುನ್ನಡೆದು ಮಧಾಯಿಯನ್ನು ಪ್ರೇಮದಿಂದ ಆಲಂಗಿಸಿ ಹಾಡತೊಡಗಿದರು.

**ಹರಿ ಬೋಲ್, ಬನ್ನಿ ನರ್ತಿಸಿ ಹಾಡಿರಿ ಜಗಾಯಿ ಮಧಾಯಿ।**
**ಹೊಡೆದಿದ್ದರೇನಂತೆ, ಹರಿ ಬೋಲ್ ಎಂದು ನರ್ತಿಸಿ**
**ಸೋದರರೇ ॥**

ನಿತ್ಯಾನಂದರ ಪ್ರೇಮ ಸ್ಪರ್ಶದಿಂದ ಅವರಿಬ್ಬರ ಪಾಷಾಣ ಹೃದಯ ಕರಗಿತು. ವಿವೇಕದ ಉದಯವಾಗಿ ಇಬ್ಬರು ಸೋದರರೂ ನಿತ್ಯಾನಂದರ ಚರಣಗಳಲ್ಲಿ ಬಿದ್ದು ಮತ್ತೆ ಮತ್ತೆ ಕ್ಷಮೆ ಯಾಚಿಸತೊಡಗಿದರು.

ನಿತ್ಯಾನಂದರ ತಲೆಗೆ ಪ್ರಹಾರವಾಗಿದ್ದನ್ನು ಕೇಳಿ ಭಕ್ತರೊಂದಿಗೆ ಓಡಿ ಬಂದ ಚೈತನ್ಯರ ರುದ್ರಮೂರ್ತಿ ನೋಡಿ ಜನ ಭಯಭೀತರಾದರು. ಸೋದರರಿಬ್ಬರೂ ಚೈತನ್ಯರ ಚರಣಗಳಲ್ಲಿ ಹೊರಳಾಡತೊಡಗಿದರು. ಅತಿಶಯ ಖೇದ ವ್ಯಕ್ತಪಡಿಸುತ್ತಾ ಕೃಪಾಭಿಕ್ಷೆ ಬೇಡತೊಡಗಿದರು. ನಾಲ್ಕೂ ಕಡೆ ಜನ ಬಂದು ಸೇರಿದರು. ಅವರೆಲ್ಲ ಚಿತ್ರಲಿಖಿತ ಬೊಂಬೆಗಳಂತೆ ನಿಷ್ಪಂದಿತರಾಗಿ ನಿಂತರು. ಆದರೂ ಚೈತನ್ಯರ ಕೋಪ ತಗ್ಗಲಿಲ್ಲ, ದುಷ್ಟರನ್ನು ಕ್ಷಮಿಸಲಿಲ್ಲ. ದಯಾಳು ನಿತ್ಯಾನಂದರು ಸೋದರರ ಅಪರಾಧವನ್ನು ಕ್ಷಮಿಸುವಂತೆ, ಅವರ ಮೇಲೆ ಕೃಪೆ ಮಾಡುವಂತೆ ಒತ್ತಾಯಿಸತೊಡಗಿದರು. ಅವರ ಅದ್ಭುತ ಪ್ರೇಮವನ್ನು ನೋಡಿ ಅಲ್ಲಿ ಉಪಸ್ಥಿತರಿದ್ದ ಎಲ್ಲರ ಮನಸ್ಸು ಕರಗಿತು. 'ಏಟು ತಿಂದೂ ಹೊಡೆದವರಿಗಾಗಿ ಪ್ರೇಮಯಾಚನೆ ಮಾಡುವ ದಯಾಳು ಇನ್ನೆಲ್ಲಿ ಸಿಕ್ಕಾನು?' ಎಂದು ಯೋಚಿಸಿ ಜನ ಚಕಿತರಾದರು.

ನಿತ್ಯಾನಂದರ ಅಲೌಕಿಕ ಚಾರಿತ್ರ್ಯ, ತ್ಯಾಗ, ತಿತಿಕ್ಷೆ ಮತ್ತು ಕ್ಷಮಾಭಾವ ಕಂಡು ಚೈತನ್ಯರ ಹೃದಯ ಪುಲಕಿತವಾಯಿತು, ಮನ ಶಾಂತವಾಯಿತು. ನಿತ್ಯಾನಂದರನ್ನು ಆಲಂಗಿಸುತ್ತ, ಅವರ ಪ್ರೇಮವನ್ನು ಪ್ರಶಂಸಿಸುತ್ತ, 'ನಿನ್ನ ಕೃಪೆಯಿಂದಲೇ ಇವರಿಬ್ಬರ ಉದ್ಧಾರವಾಗಬಲ್ಲದು' ಎಂದು ಹೇಳಿದರು. ಅವರಿಬ್ಬರ ಅಪರಾಧವನ್ನು ಕ್ಷಮಿಸಿದ್ದಷ್ಟೇ ಅಲ್ಲದೆ, ಅವರ ಮೇಲೆ ವಿಶೇಷ ಕೃಪೆ ಮಾಡಿದರು. ಇದರ ಫಲವಾಗಿ ಆ ದಿನದಿಂದ ಸೋದರರಿಬ್ಬರ ಜೀವನದಲ್ಲೂ ಪರಿವರ್ತನೆಯಾಯಿತು. ಹರಿನಾಮ ಜಪಿಸುತ್ತಾ ಸದಾಚಾರದ ಜೀವನ ನಡೆಸತೊಡಗಿದರು. ಚೈತನ್ಯರ ಇಚ್ಛೆಯಂತೆ ಜಗಾಯಿ-ಮಧಾಯಿ ಪ್ರತಿದಿನ ಬೆಳಗ್ಗೆ ಎಲ್ಲರಿಗಿಂತ ಮೊದಲು ಗಂಗಾಘಟ್ಟಕ್ಕೆ ಹೋಗಿ, ಜನ ಆನಂದದಿಂದ ಸ್ನಾನ-ಆಹ್ನಿಕಗಳನ್ನು ಮಾಡಲೆಂದು ಅದನ್ನು ತೊಳೆದು ಸ್ವಚ್ಛಗೊಳಿಸುತ್ತಿದ್ದರು.

ಇವರಿಬ್ಬರೂ ನವದ್ವೀಪದ ವಿಶೇಷ ಪ್ರಭಾವಶಾಲಿ ವ್ಯಕ್ತಿಗಳಾಗಿದ್ದರು. ಆದ್ದರಿಂದ, ಅವರ ದೃಷ್ಟಾಂತದಿಂದ ಅಲ್ಲಿನ ಬಹಳಷ್ಟು ಜನರ ಜೀವನ ಬದಲಾಯಿತು. ನವದ್ವೀಪದ ಅನೇಕ ಪಾಪಿ-ತಾಪಿ ಜನ ತಮ್ಮ ದುಷ್ಟ ಅಭ್ಯಾಸ ಬಿಟ್ಟು ಸಾಧುಭಾವದಿಂದ ಇರತೊಡಗಿದರು. ಜಗಾಯಿ-ಮಧಾಯಿಯವರ ಕಿರುಕುಳದಿಂದ ಜನ ತೊಂದರೆಗೊಳಗಾಗಿದ್ದರು. ಆದರೆ ಈಗ ಇವರಿಬ್ಬರ ಪರೋಪಕಾರ ವೃತ್ತಿ, ಧರ್ಮಭಾವವನ್ನು ನೋಡಿ ಎಲ್ಲರ ಹೃದಯದಲ್ಲಿ ಶ್ರದ್ಧೆ ಉದಿಸಿತು. ❋

*ಆಧಾರ: 'ಶ್ರೀ ಚೈತನ್ಯ ಮಹಾಪ್ರಭು'– ಸ್ವಾಮಿ ಶಾರದೇಶಾನಂದ*
*ಕನ್ನಡಾನುವಾದ – ಮಾತಾ ತ್ಯಾಗಮಯಿ*

## ಶ್ರೀಮಾತೆಯವರ ಉಪದೇಶಗಳು



❋ ಶ್ರೀರಾಮಕೃಷ್ಣರು ಹೇಳುತ್ತಿದ್ದರು, 'ಸಾಧು, ಸಾವಧಾನ್' ಅಂತ. ಸಂನ್ಯಾಸಿಯಾದವನು ಯಾವಾಗಲೂ ಎಚ್ಚರಿಕೆಯಿಂದಿರಬೇಕು. ಸಾಧುವಿನ ಹಾದಿ ತುಂಬ ಇಳಿಜಾರಿನಿಂದ ಕೂಡಿದುದು. ಇಳಿಜಾರು ದಾರಿಯಲ್ಲಿ ತುಂಬ ಜಾಗರೂಕತೆಯಿಂದ ನಡೆಯಬೇಕು. ಸಂನ್ಯಾಸಿಯಾಗುವುದೇನು ಬರೀ ಬಾಯಿಮಾತೆ ? ಸಂನ್ಯಾಸಿ ಹೆಂಗಸಿನ ಕಡೆಗೆ ನೋಡಲೇಬಾರದು. ನಡೆಯುವಾಗ ಅವನು ತನ್ನ ಹೆಬ್ಬೆರಳಿನ ಕಡೆಗೆ ಗಮನಕೊಟ್ಟು ನಡೆಯಬೇಕು. ಸಾಧುವಿನ ಕಾವಿಬಟ್ಟೆ ಅವನನ್ನು ನಾಯಿಯ ಕೊರಳಪಟ್ಟಿಯಂತೆ ರಕ್ಷಿಸುವುದು. ಅಂಥ ನಾಯಿಯನ್ನು ಯಾರೂ ಮುಟ್ಟಲಾರರು. ಅಂಥ ಸಾಧುವಿನ ಮಾರ್ಗ ಸುರಕ್ಷಿತವಾಗಿರುವುದು : ಉಳಿದವರೆಲ್ಲ ಅವನಿಗೆ ದಾರಿ ಬಿಟ್ಟುಕೊಡುವರು.

❋ ಮನಸ್ಸು ಯಾವಾಗಲೂ ಕೆಟ್ಟ ಕೆಲಸದತ್ತಲೇ ಹರಿಯುವುದು. ಒಳ್ಳೆಯ ಕೆಲಸ ಮಾಡಬೇಕೆಂದಿದ್ದರೂ ಮನಸ್ಸು ಅತ್ತ ಸಾಗದು. ಹಿಂದೆ ನಾನು ಪ್ರತಿದಿನ ಬೆಳಿಗ್ಗೆ ಮೂರು ಗಂಟೆಗೇ ಎದ್ದು ಧ್ಯಾನ ಮಾಡುತ್ತಿದ್ದೆ. ಒಂದು ದಿನ ದೇಹ ಚೆನ್ನಾಗಿರಲಿಲ್ಲ; ಆಲಸ್ಯವುಂಟಾಗಿ ನಾನು ಎಂದಿನಂತೆ ಎದ್ದು ಧ್ಯಾನ ಮಾಡಲಿಲ್ಲ. ಇದರಿಂದಾಗಿ ಕೆಲವು ದಿನ ಈ ಅಭ್ಯಾಸ ತಪ್ಪಿಹೋಯಿತು. ಆದ್ದರಿಂದ ಒಳ್ಳೆಯ ಕೆಲಸ ಮಾಡಲು ಆಂತರಿಕ ಪ್ರಯತ್ನ ಹಾಗೂ ದೃಢ ನಿಶ್ಚಯವಿರಬೇಕು.

*'ಶ್ರೀ ಶಾರದಾದೇವಿ ವಚನವೇದ', ಪು.೩೧೬ –೧೭*